ಕ್ರಮ ಸಂಖ್ಯೆ	ತಾಲ್ಲೂಕು	ವಿತರಣಾ ಟ್ರಾನ್ಸ್ ಫಾರ್ಮರ್‌ಗಳ ಸಂಖ್ಯೆ
1	ಮೈಸೂರು	993
2	ಟಿ.ನರಸೀಪುರ	1,426
3	ನಂಜನಗೂಡು	1,671
4	ಹುಣಸೂರು	1,492
5	ಕೆ.ಆರ್.ನಗರ	666
6	ಪಿರಿಯಾಪಟ್ಟಣ	1,042
7	ಹೆಚ್.ಡಿ.ಕೋಟೆ	1,113
	ಒಟ್ಟು	**8.403**

ಊ) ನಿಗಮದ ನಿಯಮಾನುಸಾರ ಎಲ್ಲಾ ಗ್ರಾಹಕರಿಗೂ ಸಂಪರ್ಕ ನೀಡುವಂತೆ ರೈತರ ಪಂಪ್‌ಸೆಟ್‌ಗಳಿಗೂ ಸಂಪರ್ಕ ನೀಡಲಾಗುತ್ತಿದೆ.

ಊ) ನಿಗಮದ ನಿಯಮಾನುಸಾರ ಎಲ್ಲಾ ಪಂಪ್‌ಸೆಟ್‌ಗಳಿಗೆ ಆದ್ಯತೆ ಮೇರೆಗೆ ಸಂಪರ್ಕ ಕಲ್ಪಿಸಲಾಗುತ್ತಿದೆ.

1006 ಶ್ರೀ ಸುನೀಲ್ ವಿ.ಹೆಗಡೆ (ಹಳಿಯಾಳ) : ಮಾನ್ಯ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿಯಲ್ಲಿ ಕೆಪಿಸಿ ಯಿಂದ 150 ಎಕರೆ ಪ್ರದೇಶದಲ್ಲಿ ಸಿಬ್ಬಂದಿ ವರ್ಗದವರಿಗೆ ನಿರ್ಮಿಸಿದ್ದ ವಸತಿ ಗೃಹಗಳು ಶಿಥಿಲಾವಸ್ಥೆಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಈ ವಸತಿ ಗೃಹಗಳನ್ನು ದುರಸ್ತಿಗೊಳಿಸಿ ಸಿಬ್ಬಂದಿ ವರ್ಗದವರಿಗೆ ನೀಡಲು ಸರ್ಕಾರ ಕ್ರಮ ಕೈಗೊಳ್ಳುವುದೆ?

ಇ) ಹಾಗಿದ್ದಲ್ಲಿ, ಈ ವಸತಿ ಗೃಹಗಳನ್ನು ಎಂದು ಯಾವಾಗ ದುರಸ್ತಿಗೊಳಿಸಲಾಗುವುದು.

ಈ) ದುರಸ್ತಿಗೊಳಿಸಿದ ವಸತಿ ಗೃಹಗಳನ್ನು ಆರ್ಥಿಕವಾಗಿ ಹಿಂದುಳಿದವರಿಗೆ ಸರ್ಕಾರ ದರ ನಿಗದಿಪಡಿಸಿ ಹಸ್ತಾಂತರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಉ) ಹಾಗಿದ್ದಲ್ಲಿ, ಸರ್ಕಾರ ನಿಗದಿಪಡಿಸಿರುವ ಮೊತ್ತ ಎಷ್ಟು ಮತ್ತು ಯಾವಾಗ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಕೆ.ಎಸ್. ಈಶ್ವರಪ್ಪ (ಇಂಧನ ಸಚಿವರು) :

ಅ) 182 ವಸತಿ ಗೃಹಗಳನ್ನು 1980 ರಲ್ಲಿ ನಿಗಮವು ದಾಂಡೇಲಿ ನಗರ ಸಭೆಯಿಂದ ಖರೀದಿಸಲಾದ 12.78 ಎಕರೆ ಪ್ರದೇಶದಲ್ಲಿ ನಿರ್ಮಿಸಿದ್ದು ಈಗ ಖಾಲಿಯಿದ್ದು ಸುಸ್ಥಿತಿಯಲ್ಲಿರುತ್ತವೆ. ಈಗ ಈ ವಸತಿ ಗೃಹಗಳನ್ನು 12.78 ಎಕರೆ ಪ್ರದೇಶ ಸಮೇತ ಯಥಾಸ್ಥಿತಿಯಲ್ಲಿ ಹರಾಜು ಮೂಲಕ ವಿಲೇವಾರಿ ಮಾಡುವ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.

ಆ) ಇ) ಈ) ಮತ್ತು ಉ) ಉದ್ಭವಿಸುವುದಿಲ್ಲ.

999 ಶ್ರೀ ಅಮರೇಶ್ (ಮುಳಬಾಗಿಲು) : ಮಾನ್ಯ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಳಬಾಗಿಲು ತಾಲ್ಲೂಕು ಅತ್ಯಂತ ಹಿಂದುಳಿದ ತಾಲ್ಲೂಕಾಗಿದ್ದು ಇಲ್ಲಿನ ರೈತರು ಅಂತರ್ ಜಲವನ್ನು ಅವಲಂಬಿಸುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಪ್ರತಿ ದಿನ ಒದಗಿಸುವ (ಫುಲ್‌ಫೇಸ್) ವಿದ್ಯುತ್ತಿನ ಅವಧಿಯೆಷ್ಟು; ಈ ಅವಧಿಯಲ್ಲಿ ಸಮರ್ಪಕವಾಗಿ ವಿದ್ಯುತ್ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಸದರಿ ಅವಧಿಯನ್ನು ಹೆಚ್ಚಿಸಲು ಸರ್ಕಾರ ಕ್ರಮ ಕೈಗೊಳ್ಳುವುದೆ?

ಶ್ರೀ ಕೆ.ಎಸ್. ಈಶ್ವರಪ್ಪ (ಇಂಧನ ಸಚಿವರು) :

ಅ) ಮುಳಬಾಗಿಲು ತಾಲ್ಲೂಕು ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ವ್ಯಾಪ್ತಿಯ ಕೋಲಾರ ಜಿಲ್ಲೆಗೆ ಒಳಪಟ್ಟಿರುತ್ತದೆ. ಈ ಜಿಲ್ಲೆಯಲ್ಲಿ ಪ್ರತಿ ವರ್ಷ ಬೀಳುವ ಮಳೆಯ ಪ್ರಮಾಣ ಕಡಿಮೆ ಇದ್ದು ಅಂತರ್ಜಲ ಮಟ್ಟವು ಕುಸಿದಿರುತ್ತದೆ. ಈ ತಾಲ್ಲೂಕಿನ ರೈತರು ವ್ಯವಸಾಯಕ್ಕಾಗಿ ಅಂತರ್ಜಲದಿಂದ ಕೊಳವೆ ಬಾವಿಗಳನ್ನು ಅವಲಂಬಿಸಿರುತ್ತಾರೆ.

ಆ) ಕಳೆದ ವರ್ಷ ನಿರೀಕ್ಷೆಗಿಂತ ಕಡಿಮೆ ಮಳೆಯಾಗಿರುವುದರಿಂದ ಜಲಾಶಯಗಳು ಪೂರ್ಣವಾಗಿ ತುಂಬದೆ ಜಲವಿದ್ಯುಚ್ಛಕ್ತಿ ಉತ್ಪಾದನೆ ಕಡಿಮೆ ಇದ್ದರು ಸಹ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ಬೇರೆ ಬೇರೆ ಮೂಲಗಳಿಂದ ವಿದ್ಯುತ್ ಖರೀದಿಸಿ ಪ್ರತಿದಿನ 6 ರಿಂದ 8 ಗಂಟೆಗಳ ಕಾಲ 3 ಫೇಸ್ ವಿದ್ಯುತ್ತನ್ನು ಮತ್ತು 6 ಗಂಟೆಗಳ ಕಾಲ ಸಿಂಗಲ್ ಫೇಸ್ ವಿದ್ಯುತ್ತನ್ನು ಜೂನ್–09ರವರೆಗೂ ಸರಬರಾಜು ಮಾಡುತ್ತಾ ಬಂದಿದೆ.